ವಿಷಯ:- ಬೈಂದೂರು ಕುಂದಾಪುರಗಳಲ್ಲಿ ಗ್ರಂಥಾಲಯ ಕಟ್ಟಡ ವಿಸ್ತರಣೆ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ ೫೧:- (೧೪೮)
ಶ್ರೀ. ಜಿ.ಎಸ್. ಆಚಾರ್ (ಬೈಂದೂರು)
ಮಾನ್ಯ ವಯಸ್ಕರ ಶಿಕ್ಷಣರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಗ್ರಂಥಾಲಯ ಕಟ್ಟಡ ನಿರ್ಮಿಸಲು ಹಾಗೂ ಕುಂದಾಪುರದಲ್ಲಿ ಗ್ರಂಥಾಲಯ ಕಟ್ಟಡ ವಿಸ್ತರಣೆ ಮಾಡಲು ಯೋಜಿಸಲಾಗಿದೆಯೆ?
ಆ) ಹಾಗಿದ್ದಲ್ಲಿ ಅದಕ್ಕೆ ತಗುಲುವ ವೆಚ್ಚವೆಷ್ಟು?
ಇ) ಕಟ್ಟಡದ ನಿರ್ಮಾಣವು ವಿಳಂಬವಾಗಲು ಕಾರಣವೇನು?

ಶ್ರೀ. ಪ್ರಭಾಕರ್ ಎಸ್. ರಾಣೆ
(ವಯಸ್ಕರ ಶಿಕ್ಷಣ ಸಚಿವರು)

ಹೌದು.

ಕುಂದಾಪುರ ಶಾಖಾ ಗ್ರಂಥಾಲಯದ ಕಟ್ಟಡಕ್ಕೆ ರೂ. ೭೩-೦೦ ಲಕ್ಷಗಳನ್ನು ಒದಗಿಸಿದೆ. ಬೈಂದೂರಿನ ಕಟ್ಟಡಕ್ಕೆ ನಿವೇಶನ ದೊರಕಿಸಿಕೊಳ್ಳಲು ಪ್ರಯತ್ನ ಮಾಡಲಾಗುತ್ತಿದೆ.

ಬೈಂದೂರಿನ ಕಟ್ಟಡಕ್ಕೆ ಇನ್ನೂ ನಿವೇಶನ ದೊರಕಿಲ್ಲವಾದಕಾರಣ ಕುಂದಾಪುರದ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ:- ಬೀದರ್‌ನಲ್ಲಿ ಡೈರಿ ಪ್ರಾರಂಭ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೫೨:- (೧೯೨)
ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್)
ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್‌ನಲ್ಲಿ ಡೈರಿ ಪ್ರಾರಂಭಿಸುವ ಕಾರ್ಯ : ಪ್ರಗತಿ ಯಾವ ಹಂತದಲ್ಲಿದೆ;
ಆ) ಇದಕ್ಕಾಗಿ ರಾಜ್ಯ ಸರ್ಕಾರ ಇದುವರೆವಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ, ಹಾಗೂ ಇದರಲ್ಲಿ ಖರ್ಚಾಗಿರುವ ಹಣವೆಷ್ಟು?
ಇ) ಡೈರಿ ಪ್ರಾರಂಭಿಸುವ ಸಲುವಾಗಿ ರಾಷ್ಟ್ರೀಯ ಹೈನುಗಾರಿಕೆ ನಿಗಮ (ಎನ್.ಡಿ.ಡಿ.ಬಿ) ದಿಂದ ಯಾವ ರೀತಿಯ ನೆರವನ್ನು ಕೋರಲಾಗಿದೆ. ಅದಕ್ಕೆ ಅವರಿಂದ ಬಂದ ಪ್ರತಿಕ್ರಿಯೆ ಏನು?
ಈ) ಬೀದರ್‌ನಲ್ಲಿ ಹಾಲಿನ ಡೈರಿಯನ್ನು ಇನ್ನೂ ಎಷ್ಟು ದಿನಗಳಲ್ಲಿ ಪ್ರಾರಂಭಿಸಲಾಗುವುದು?

ಶ್ರೀ.ಕೆ.ಎನ್. ನಾಗೇಗೌಡ
(ಪಶುಸಂಗೋಪನಾ ಮತ್ತು ಪಶುವೈದ್ಯ ರಾಜ್ಯ ಸಚಿವರು)

ಬೀದರ್‌ನಲ್ಲಿ ಡೈರಿ ಸ್ಥಾಪನೆಯ ಉದ್ದೇಶಕ್ಕಾಗಿ ಜಮೀನನ್ನು ಗುರುತಿಸಿ ಸುಚ್ಚರ್ಗಾ ಹಾಲು ಒಕ್ಕೂಟವು ಇದರ ಹಕ್ಕು ಪತ್ರವನ್ನು ಪಡೆದಿರುತ್ತದೆ. ಡೇರಿಗೆ ರಸ್ತೆಯ ಉದ್ದೇಶಕ್ಕಾಗಿ ಖಾಸಗಿಯವರಿಂದ ಜಮೀನನ್ನು ವಶಪಡಿಸಿಕೊಳ್ಳಬೇಕಾಗಿದ್ದು ಈ ಸಂಬಂಧವಾಗಿ ಅವರೊಂದಿಗೆ ಒಪ್ಪಂದವನ್ನು ಮಾಡಿಕೊಂಡು ರೂ. ೧೩,೦೦೦.೦೦ ವನ್ನು ಮುಂಗಡವಾಗಿಯೂ ನೀಡಲಾಗಿದೆ. ಈ ಖಾಸಗಿ ಜಮೀನನ್ನು ನೋಂದಣಿ ಮಾಡಿಸಿಕೊಂಡು ಕೃಷಿಯೇತರ ಜಮೀನನ್ನಾಗಿ